www.vijayavani.net

ನಂ.1 ಕನ್ನಡ ದಿನಪತ್ರಿಕೆ **ವಿಜಯವಾಣಿ**

● VIJAYAVANI » BELAGAVI

4

ಭಾನುವಾರ 24 ಮೇ 2026
24 MAY 2026

ಬೆಳಗಾವಿ ಲೋಕಲ್ ಎಕ್ಸ್‌ಪ್ರೆಸ್

ವಿಜಯವಾಣಿ ಚಿತ್ರ

ಬೆಳಗಾವಿ ನಗರ ಪೊಲೀಸ್ ಕಮಿಷ್ನರೇಟ್ ವ್ಯಾಪ್ತಿಯ ಶ್ವಾನ ದಳಕ್ಕೆ ಮಾದಕ ದ್ರವ್ಯ ಪತ್ತೆ ಹಚ್ಚುವ ತರಬೇತಿ ಪಡೆದ ಎರಡು ಶ್ವಾನಗಳು ಸೇರ್ಪಡೆಗೊಂಡಿದ್ದು, ಶನಿವಾರ ಬಸ್ ನಿಲ್ದಾಣದಲ್ಲಿ ತಪಾಸಣಾ ಕಾರ್ಯಾಚರಣೆ ನಡೆಸುವ ಮೂಲಕ ತಮ್ಮ ಕಾರ್ಯ ಆರಂಭಿಸಿದವು.

ನೀಟ್ ಅಭ್ಯರ್ಥಿಗಳಿಗೆ ಫ್ರೀ ಬಸ್ ಪ್ರಯಾಣ

ಮೊದಲನೇ ಪುಟದಿಂದ...

ಪತ್ರಿಕಾ ರಂಗದಲ್ಲಿ ವಿಜಯವಾಣಿ ಮೊದಲ ಸ್ಥಾನದಲ್ಲಿದೆ. ಅದೇರೀತಿ, ಸಾರಿಗೆ ಕ್ಷೇತ್ರದಲ್ಲೂ ವಿಆರ್‌ಎಲ್ ಸಮೂಹ ಸಂಸ್ಥೆಗಳು ನಂ.1 ಸ್ಥಾನದಲ್ಲಿದ್ದು, ದೇಶಾದ್ಯಂತ ಆ ಸಂಸ್ಥೆಯು ಸಾರಿಗೆ ಜಾಲ ಹೊಂದಿದೆ. ಇದರಲ್ಲಿ ಡಾ.ವಿಜಯ ಸಂಕೇಶ್ವರ ಅವರ ಶ್ರಮ ಅಪಾರವಾದದ್ದೆಂದು ಸಚಿವರು ಶ್ಲಾಘಿಸಿದರು. ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಉದ್ದೇಶದಿಂದ ವಿಜಯವಾಣಿ ಪತ್ರಿಕೆ ಎಜುಕೇಷನ್ ಎಕ್ಸ್‌ಪೋ ಆಯೋಜಿಸಿದೆ. ಶೇ.90 ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳು ಒಂದೇ ಸೂರಿನಡಿ ಸೇರಿವೆ. ಕೋರ್ಸ್, ಕಾಲೇಜು ಮತ್ತು ಶುಲ್ಕದ ಬಗ್ಗೆ ಉಪಯುಕ್ತ ಮಾಹಿತಿ ಸಿಗಲಿದೆ. ಇದನ್ನು ವಿದ್ಯಾರ್ಥಿಗಳು, ಪಾಲಕರು ಸದ್ಬಳಕೆ ಮಾಡಿಕೊಳ್ಳುವಂತಾಗಬೇಕೆಂದು ಸಚಿವರು ಸಲಹೆ ನೀಡಿದರು. ಇದಕ್ಕೂ ಮುನ್ನ ಸಚಿವರು ಎಕ್ಸ್‌ಪೋದಲ್ಲಿ ಪ್ರತಿಷ್ಠಾಪಿಸಿರುವ ಶಿಕ್ಷಣ ಸಂಸ್ಥೆಗಳ ಪ್ರಾತ್ಯಕ್ಷಿಕೆ ಕೇಂದ್ರಗಳಿಗೆ ಭೇಟಿ ನೀಡಿ ಮಾಹಿತಿ ಪಡೆದರು. ವಿಆರ್‌ಎಲ್ ಸಮೂಹ ಸಂಸ್ಥೆಗಳ ಚೇರ್ಮನ್ ಡಾ. ವಿಜಯ ಸಂಕೇಶ್ವರ, ನ್ಯಾಷನಲ್ ಕಾಲೇಜು ಆಫ್ ಎಜುಕೇಷನ್ ಸೊಸೈಟಿಯ (ಎನ್‌ಇಎಸ್) ಕರ್ನಾಟಕದ ಅಧ್ಯಕ್ಷ ವಿ.ವೆಂಕಟಶಿವಾರೆಡ್ಡಿ ಸೇರಿ ಮತ್ತಿತರರಿದ್ದರು.

ಶ್ರೀರಾಮ ಸೇನೆ ಪ್ರತಿಭಟನೆ | ಬಕ್ರೀದ್ ಹಿನ್ನೆಲೆಯಲ್ಲಿ ನಿಗಾ ವಹಿಸಲು ಮನವಿ

ಗೋ ಅಕ್ರಮ ಸಾಗಣೆ ತಡೆಗೆ ಆಗ್ರಹ

ಬೆಳಗಾವಿ: ಬಕ್ರೀದ್ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಗೋವುಗಳ ಅಕ್ರಮ ಸಾಗಣೆ, ಅನಧಿಕೃತ ಕಸಾಯಿಖಾನೆ ಹಾಗೂ ಕಾನೂನು ಬಾಹಿರ ಗೋಹತ್ಯೆ ತಡೆಯಲು ಆಗ್ರಹಿಸಿ ನಗರದಲ್ಲಿ ಗುರುವಾರ ಶ್ರೀರಾಮ ಸೇನೆ ಕಾರ್ಯಕರ್ತರು ಪ್ರತಿಭಟಿಸಿ, ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕು. ಮೇ 28ರಂದು ಬಕ್ರೀದ್ ಇದ್ದು, ಮುಂಚಿತವಾಗಿ ಜಿಲ್ಲೆಯ ವಿವಿಧ ಭಾಗಗಳಿಂದ ಅಕ್ರಮವಾಗಿ ಗೋವು ಸಾಗಿಸುವ ಸಾಧ್ಯತೆಯಿದೆ. ಇದನ್ನು ತಡೆಯಲು ಚೆಕ್‌ಪೋಸ್ಟ್ ಆರಂಭಿಸಬೇಕು. ಜಾನುವಾರು ಸಾಗಿಸುವ ವಾಹನಗಳಿಗೆ ದಾಖಲೆ, ಅನುಮತಿ ಹಾಗೂ ಪಶು ವೈದ್ಯಕೀಯ ಪ್ರಮಾಣಪತ್ರ ಕಡ್ಡಾಯಗೊಳಿಸಬೇಕು. ಅನುಮಾಸ್ಪದ ಗೋದಾಮು ಮತ್ತು ಖಾಸಗಿ ಸ್ಥಳಗಳಲ್ಲಿ ನಡೆಯುವ ಕಸಾಯಿಖಾನೆಗಳ ಮೇಲೆ ದಾಳಿ ನಡೆಸಬೇಕು. ಪೊಲೀಸ್ ಇಲಾಖೆ, ಪಶುಪಾಲನಾ ಇಲಾಖೆ ಹಾಗೂ ಸ್ಥಳೀಯ ಆಡಳಿತಗಳ ಜಂಟಿ ಕಾರ್ಯಪಡೆ ರಚಿಸಿ ನಿಗಾ ವಹಿಸಬೇಕು. ರಾತ್ರಿ ವಿಶೇಷ ಪೊಲೀಸ್ ಗಸ್ತು ನಿಯೋಜಿಸಬೇಕು. ತಾಲೂಕು ಮಟ್ಟದಲ್ಲಿ ದೂರು ಸ್ವೀಕರಿಸಲು ಸಹಾಯವಾಣಿ ಆರಂಭಿಸಬೇಕು ಎಂದು ಆಗ್ರಹಿಸಿದರು. ಸೇನೆಯ ಉತ್ತರ ಕರ್ನಾಟಕ ಅಧ್ಯಕ್ಷ ರವಿಕುಮಾರ ಕೋಕಿತಕರ, ವಿನೋದ ಹಂಗರಗೇಕರ, ವಿನಯ ಅಂಗ್ರೊಳ್ಳಿ, ನವೀನ ಮಠಪತಿ, ಸಂತೋಷ ಜಾಧವ, ಓಂಕಾರ ಗೊಡಸೆ, ಬಾಳು ಪವಾರ ಇತರರಿದ್ದರು.

ವಿಜಯವಾಣಿ ಚಿತ್ರ

ಗೋವು ಅಕ್ರಮ ಸಾಗಣೆ ತಡೆಗೆ ಆಗ್ರಹಿಸಿ ಶ್ರೀರಾಮಸೇನೆಯಿಂದ ಗುರುವಾರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯಿತು. ರವಿಕುಮಾರ ಕೋಕಿತಕರ, ವಿನಯ ಅಂಗ್ರೊಳ್ಳಿ, ನವೀನ ಮಠಪತಿ, ಸಂತೋಷ ಜಾಧವ, ವಿನೋದ ಹಂಗರಗೇಕರ ಇತರರಿದ್ದರು.

ಸಿಎಂ ನಮ್ಮ ಮನೆ ಆರಂಭ

ಮೊದಲನೇ ಪುಟದಿಂದ...

75 ಎಕರೆ ವಿಸ್ತೀರ್ಣದಲ್ಲಿ ಅಂದಾಜು 943 ಕೋಟಿ ರೂ. ವೆಚ್ಚದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಲಾಗುತ್ತಿದೆ. ಇದುವರೆಗೂ ಕೇವಲ ಮನೆ ಮತ್ತು ನಿವೇಶನ ನೀಡುತ್ತಿದ್ದ ಗೃಹ ಮಂಡಳಿ ಹಾಗೂ ವಸತಿ ಇಲಾಖೆ ಇದೇ ಮೊದಲ ಬಾರಿಗೆ ಕ್ರೀಡಾಂಗಣ ನಿರ್ಮಾಣದಂತಹ ಬೃಹತ್ ಯೋಜನೆಗೆ ಮುಂದಾಗಿರುವುದು ಶ್ಲಾಘನೀಯ. ಈ ಬೃಹತ್ ಯೋಜನೆ ಸಾಕಾರಗೊಳ್ಳುವಲ್ಲಿ ಶ್ರಮಿಸಿದ ಸಚಿವ ಜಮೀರ್ ಅಹ್ಮದ್ ಖಾನ್ ಮತ್ತು ಗೃಹ ಮಂಡಳಿ ಅಧ್ಯಕ್ಷ ಶಿವಲಿಂಗೇಗೌಡ ಕಾರ್ಯ ಅಭಿನಂದನಾರ್ಹ ಎಂದು ಮುಖ್ಯಮಂತ್ರಿಗಳು ಮೆಚ್ಚುಗೆ ವ್ಯಕ್ತಪಡಿಸಿದರು.

ವಸತಿ ಯೋಜನೆಗೆ ಚಾಲನೆ

ಇದೇ ವೇಳೆ ಸಿಎಂ ನಮ್ಮ ಮನೆ, ಸೂರ್ಯ ಶೈನ್ ದ- ಡಿವೈನ್ ವಸತಿ ಯೋಜನೆಗಳಿಗೆ ಚಾಲನೆ ನೀಡಲಾಯಿತು. ಸೂರ್ಯನಗರ 4ನೇ ಹಂತದ ಯೋಜನೆಗೆ ಭೂಮಿ ನೀಡಿದವರಿಗೆ ಲಾಟರಿ ಮೂಲಕ ನಿವೇಶನ ಹಂಚಿಕೆ ಮಾಡಲಾಯಿತು. ಸ್ವಂತ ಮನೆ ಹೊಂದಬೇಕು ಎನ್ನುವುದು ಎಲ್ಲರ ಕನಸು. ಬೆಂಗಳೂರಿನಲ್ಲಿ ಭೂಮಿಯ ಬೆಲೆ ಗಗನಕ್ಕೇರಿರುವಾಗ, ಸ್ವಂತ ಮನೆ ಕಟ್ಟಿಕೊಳ್ಳುವ ಸಾಮಾನ್ಯರ ಕನಸು ಈಡೇರಿಸಿಕೊಳ್ಳುವುದು ಕಷ್ಟವಾಗಲಿದೆ. ಸಾಮಾನ್ಯರ ಕನಸನ್ನು ನನಸು ಮಾಡಲು ಗೃಹ ಮಂಡಳಿ ಕಡಿಮೆ ದರದಲ್ಲಿ ಸೈಟು ನೀಡುತ್ತಿರುವುದು ಸಂತೋಷದ ವಿಚಾರ ಎಂದ ಸಿದ್ದರಾಮಯ್ಯ ಹೇಳಿದರು.

ಕನಿಷ್ಠ ವೇತನ ಹರ್ಷ ಆಕ್ರೋಶ

ಮೊದಲನೇ ಪುಟದಿಂದ...

ಇತರ ಪ್ರಮುಖ ಅಂಶಗಳು: 1. ಕಾರ್ಮಿಕರ ಕೌಶಲ್ಯದ ಆಧಾರದ ಮೇಲೆ ಅತಿ ಕುಶಲ, ಕುಶಲ, ಅರೆ ಕುಶಲ ಮತ್ತು ಅಕುಶಲ ಎಂದು 4 ವಿಭಾಗಗಳಾಗಿ ವರ್ಗೀಕರಿಸಲಾಗಿದ್ದು, ವಲಯವಾರು (ಝೋನ್) ವೇತನ ದರ ನಿಗದಿ. 2. ಉದಾಹರಣೆಗೆ, ವಿದ್ಯುತ್ ಉತ್ಪಾದನಾ ಘಟಕಗಳು ಮತ್ತು ಅತ್ಯಂತ ಕಠಿಣವಾದ ಒಳಚರಂಡಿ ಹಾಗೂ ಶೌಚಗೃಹ ಸ್ವಚ್ಛಗೊಳಿಸುವ (ಸಫಾಯಿ ಕರ್ಮಚಾರಿ) ನೌಕರರಿಗೆ ವಲಯ-1 ರ ಅಡಿ ದಿನಕ್ಕೆ ಕನಿಷ್ಠ 989 ರೂ. ನಿಂದ ಅತಿ ಕುಶಲ ನೌಕರರಿಗೆ ಗರಿಷ್ಠ 1316.36 ರೂ. ವರೆಗೆ ಕನಿಷ್ಠ ವೇತನ ನಿಗದಿ. 3. ವಲಯ-2 ಮತ್ತು ವಲಯ-3 ರ ವ್ಯಾಪ್ತಿಯಲ್ಲಿಯೂ ಶ್ರಮಿಕರ ಕೌಶಲ್ಯಕ್ಕೆ ತಕ್ಕಂತೆ ಮಾಸಿಕ 19,319 ರೂ. ನಿಂದ ಹಿಡಿದು 34,225 ರೂ. ಗಳವರೆಗೆ ಆಕರ್ಷಕ ವೇತನ ಶ್ರೇಣಿ. 4. ಕಾರ್ಮಿಕರ ಹಿತದೃಷ್ಟಿಯಿಂದ ಈ ಅಧಿಸೂಚನೆಯಲ್ಲಿ ಅತ್ಯಂತ ಪ್ರಮುಖವಾದ 'ಬದಲಾಗುವ ತುಟ್ಟಿಭತ್ಯೆ' ನಿಯಮ ಅಳವಡಿಕೆ, ಹೆಚ್ಚುತ್ತಿರುವ ಹಣದುಬ್ಬರ ಮತ್ತು ಜೀವನ ವೆಚ್ಚ ಸರಿದೂಗಿಸಲು ಗ್ರಾಹಕ ಬೆಲೆ ಸೂಚ್ಯಂಕದ ಆಧಾರದ ಮೇಲೆ ವರ್ಷಕ್ಕೊಮ್ಮೆ (ಪ್ರತಿ ವರ್ಷದ ಏಪ್ರಿಲ್ 1 ರಂದು) ತುಟ್ಟಿಭತ್ಯೆ ಲೆಕ್ಕಾಚಾರ. 5. ಉದ್ಯೋಗದಾತರು ಒಂದೇ ರೀತಿಯ ಹಾಗೂ ಸಮ ಪ್ರಮಾಣದ ಕೆಲಸ ನಿರ್ವಹಿಸುವ ಮಹಿಳೆಯರು, ಪುರುಷರು, ತೃತೀಯ ಲಿಂಗಿಗಳು ಮತ್ತು ವಿಕಲಚೇತನ ಕಾರ್ಮಿಕರ ನಡುವೆ ಯಾವುದೇ ತಾರತಮ್ಯ ಮಾಡುವಂತಿಲ್ಲ. ಎಲ್ಲರಿಗೂ ಸಮಾನ ದರದ ವೇತನವನ್ನು ಸಂದಾಯ ಮಾಡಬೇಕು. 6. ಒಂದು ದಿನದ ಕೆಲಸವನ್ನು 8 ಗಂಟೆಗಳ ಅವಧಿ ಎಂದು ಪರಿಗಣಿಸಲಾಗಿದ್ದು, ತುಂಡು ಆಧಾರದ (ಪೀಸ್ ವರ್ಕ್) ಮೇಲೆ ಕೆಲಸ ಮಾಡುವ ಕಾರ್ಮಿಕರ ಗಳಿಕೆಯೂ ಸಾಮಾನ್ಯ ದಿನದ ವೇತನಕ್ಕಿಂತ ಕಡಿಮೆ ಇರಬಾರದು ಎಂದು ಸ್ಪಷ್ಟಪಡಿಸಲಾಗಿದೆ. 7. ಸಂಸ್ಥೆಯ ವಾರದ ರಜೆ ಅಥವಾ ಹಬ್ಬದ ರಜಾ ದಿನಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೂ ಕನಿಷ್ಠ ವೇತನ ನಿಯಮಗಳ ಅಡಿಯಲ್ಲಿ ಇಮ್ಮಡಿ ವೇತನ ಪಾವತಿಸಬೇಕಾಗುತ್ತದೆ. ಮಾಸಿಕ ವೇತನವನ್ನು ಕಡ್ಡಾಯವಾಗಿ ಚೆಕ್ ಅಥವಾ ನೇರವಾಗಿ ಅವರ ಬ್ಯಾಂಕ್ ಖಾತೆಗೆ ಜಮೆ ಮಾಡಬೇಕು. 8. ದಿನಗೂಲಿ ನೌಕರರ ದಿನದ ವೇತನವನ್ನು ಲೆಕ್ಕ ಹಾಕುವಾಗ ಮಾಸಿಕ ವೇತನವನ್ನು ಕಡ್ಡಾಯವಾಗಿ 26 ದಿನಗಳಿಂದ ಭಾಗಿಸಬೇಕು (ಉಳಿದ 4 ದಿನಗಳನ್ನು ವೇತನ ಸಹಿತ ರಜೆ ಎಂದು ಪರಿಗಣಿಸಲಾಗುತ್ತದೆ). ಭಾಗಾಕಾರದಲ್ಲಿ ಭಿನ್ನಾಂಕ/ಚಿಲ್ಲರೆ ಬಂದರೆ ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸಬೇಕು. 9. ಅಧಿಸೂಚನೆಯಲ್ಲಿ ಯಾವುದೇ ನಿರ್ದಿಷ್ಟ ಕಾರ್ಮಿಕರ ವರ್ಗ ಹೆಸರಿಸದೆ ಇದ್ದ ಪಕ್ಷದಲ್ಲಿ, ಅದೇ ಸ್ವರೂಪದ ಕೆಲಸ ನಿರ್ವಹಿಸುತ್ತಿರುವ ಇತರ ವರ್ಗದ ಕಾರ್ಮಿಕರಿಗೆ ನೀಡಲಾಗುವ ವೇತನವನ್ನೇ ಅವರಿಗೂ ಸಂದಾಯ ಮಾಡಬೇಕು. ಯಾರಾದರೂ ಕಾರ್ಮಿಕರನ್ನು ದಿನದ ನಿಗದಿತ 8 ಗಂಟೆಗಳಿಗಿಂತ ಕಡಿಮೆ ಅವಧಿಯ ಕೆಲಸಕ್ಕೆ ನೇಮಿಸಿಕೊಂಡರೆ, ಆ ಕಡಿಮೆ ಅವಧಿಗೆ ಅನುಗುಣವಾಗಿ ವೇತನ ಲೆಕ್ಕ ಹಾಕಿ ನೀಡಬೇಕು

ಲಾಭ ನಷ್ಟದ ಲೆಕ್ಕಾಚಾರ

- **ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ಕಾರ್ಮಿಕ ವರ್ಗಕ್ಕೆ ಕನಿಷ್ಠ ವೇತನ ಹೆಚ್ಚಳ ಸಮಾಧಾನ ತರಿಸಿದೆ**
- **ಕನಿಷ್ಠ ವೇತನ ಹೆಚ್ಚಳದಿಂದ ಕರ್ನಾಟಕದಲ್ಲಿ ಉತ್ಪಾದನಾ ವೆಚ್ಚ ಕೂಡ ಸಹಜವಾಗಿ ಹೆಚ್ಚಾಗಲಿದೆ**
- **ಹೂಡಿಕೆಗಳು ಅನ್ಯ ರಾಜ್ಯಗಳತ್ತ ಮುಖ ಮಾಡುವುದರಿಂದ ರಾಜ್ಯದ ಪರಿಣಾಮ ಉಂಟಾಗಲಿದೆ**

ಉದ್ಯೋಗದಾತರ ಸಂಘಟನೆ ಆಕ್ಷೇಪ: ಕನಿಷ್ಠ ವೇತನ ಪರಿಷ್ಕರಣೆ ಅಧಿಸೂಚನೆಗೆ ಕರ್ನಾಟಕ ಉದ್ಯೋಗದಾತರ ಸಂಘ (ಎಂಪ್ಲಾಯಿಸ್ ಅಸೋಸಿಯೇಷನ್) ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. ಸರ್ಕಾರದ ಈ ನಿರ್ಧಾರ ಕಾನೂನುಬಾಹಿರವಾಗಿದ್ದು, ಹಲವು ತಾಂತ್ರಿಕ ಹಾಗೂ ಕಾನೂನು ದೋಷಗಳಿಂದ ಕೂಡಿದೆ ಎಂದು ಸಂಘದ ಅಧ್ಯಕ್ಷರಾದ ಬಿ. ಸಿ. ಪ್ರಭಾಕರ್ ಗಂಭೀರವಾಗಿ ಆರೋಪಿಸಿದ್ದಾರೆ. ಅಲ್ಲದೆ ಸರ್ಕಾರದ 3 ಕಾನೂನು ಉಲ್ಲಂಘನೆ ಅಂಶಗಳನ್ನು ಸಂಘ ಎತ್ತಿ ತೋರಿಸಿದೆ.

1. ಕೇಂದ್ರ ಸರ್ಕಾರ 2025ರ ನ.21ರಿಂದಲೇ ಹೊಸ 'ವೇತನ ಸಂಹಿತೆ 2019' ಜಾರಿಗೆ ತಂದಿದೆ, ಇದರಿಂದಾಗಿ ಹಳೆಯ 'ಕನಿಷ್ಠ ವೇತನ ಕಾಯ್ದೆ 1948' ರದ್ದಾಗಿದೆ. ಆದಾಗ್ಯೂ, ರಾಜ್ಯ ಸರ್ಕಾರ ರದ್ದಾಗಿರುವ ಹಳೆಯ ಕಾಯ್ದೆಯಡಿ ಅಧಿಕಾರ ಚಲಾಯಿಸಿ ಈ ಅಧಿಸೂಚನೆ ಹೊರಡಿಸಿರುವುದು ಕಾನೂನುಬಾಹಿರ ಹಾಗೂ ವ್ಯಾಪ್ತಿ ಮೀರಿದ ಕ್ರಮ

2. ಕನಿಷ್ಠ ವೇತನ ಪರಿಷ್ಕರಣೆಗೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯವು 2025ರ ಜುಲೈ 28 ರಂದು ಮಧ್ಯಂತರ ಆದೇಶ ನೀಡಿತ್ತು. ಅದರಂತೆ ಸಲಹಾ ಮಂಡಳಿಯ ಸಭೆಯಲ್ಲಿ ತೆಗೆದುಕೊಳ್ಳುವ ಯಾವುದೇ ನಿರ್ಧಾರ ಮುಂದಿನ ವಿಚಾರಣೆಯವರೆಗೆ ಅನುಷ್ಠಾನಗೊಳಿಸಬಾರದು ಎಂದು ಸೂಚಿಸಿತ್ತು. ಈಗ ಸರ್ಕಾರ ಹೊರಡಿಸಿರುವ ಅಧಿಸೂಚನೆ ಹೈಕೋರ್ಟ್‌ನ ಈ ಆದೇಶದ ನೇರ ಉಲ್ಲಂಘನೆ

3. ಹೊಸ ವೇತನ ಸಂಹಿತೆಯು ಹಳೆಯ 'ಅನುಸೂಚಿತ ಉದ್ದಿಮೆಗಳು' ಎಂಬ ಪರಿಕಲ್ಪನೆಯನ್ನೇ ಸಂಪೂರ್ಣವಾಗಿ ರದ್ದುಗೊಳಿಸಿದೆ. ಹೀಗಿದ್ದರೂ, ಕಾನೂನಿನ ಪ್ರಕಾರ ಅಸ್ತಿತ್ವದಲ್ಲೇ ಇಲ್ಲದ 81 ಅನುಸೂಚಿತ ಉದ್ದಿಮೆಗಳಿಗೆ ಈ ಕನಿಷ್ಠ ವೇತನ ಅನ್ವಯಿಸಿ ಆದೇಶ ಹೊರಡಿಸಿರುವುದು ತರ್ಕಹೀನ.

ಬೆಂಗಳೂರಲ್ಲಿಂದು ಕೈ-ಕಮಲ ಹೈವೋಲ್ಟೇಜ್ ಸಭೆ

ಮೊದಲನೇ ಪುಟದಿಂದ...

ಜತೆಗೆ ಎಸ್‌ಐಆರ್ ಮಹತ್ವದ ಬಗ್ಗೆ ಕೇಂದ್ರೀಕೃತವಾಗಿರಲಿದೆ. ಇನ್ನು ಕಾಂಗ್ರೆಸ್‌ನಲ್ಲೂ ಭಾನುವಾರ ಮಹತ್ವದ ಸಭೆ ನಡೆಯುತ್ತಿದೆ. ಎಸ್‌ಐಆರ್‌ನಿಂದ ವಿವಿಧ ರಾಜ್ಯಗಳಲ್ಲಿ ಆಗಿರುವ ಬೆಳವಣಿಗೆ ಮತ್ತು ಕಾಂಗ್ರೆಸ್ ಮೇಲಿನ ಪರಿಣಾಮಗಳ ಕುರಿತು ಮಂಥನಕ್ಕೆ ಕೆಪಿಸಿಸಿ ವೇದಿಕೆ ಸಜ್ಜುಮಾಡಿದ್ದು, ಎಐಸಿಸಿ ಪ್ರಮುಖರು ಸಭೆ ಮುನ್ನಡೆಸಲಿದ್ದಾರೆ. ಈ ಎರಡೂ ಸಭೆಗಳು ಸಾಂಕೇತಿಕವಂತೂ ಅಲ್ಲವೇ ಅಲ್ಲ. ಭವಿಷ್ಯದ ರಾಜಕೀಯ ನೆಲೆ ಭದ್ರಪಡಿಸಿಕೊಳ್ಳಲು ಪಕ್ಷಗಳಿಗೆ ಅತೀ ಮುಖ್ಯ ಎಂಬ ಮಾತು ರಾಜಕೀಯ ಪಡಸಾಲೆಯಲ್ಲಿದೆ. ಆಡಳಿತಕ್ಕೆ 3 ವರ್ಷ ತುಂಬಿರುವ ಹೊತ್ತಿನಲ್ಲೇ, ಮುಂದಿನ ವಿಧಾನಸಭೆ ಚುನಾವಣೆ ಗುರಿಯಿಟ್ಟುಕೊಂಡು 2 ರಾಷ್ಟ್ರೀಯ ಪಕ್ಷಗಳು ತಮ್ಮ ಬುನಾದಿ ಭದ್ರಪಡಿಸಿಕೊಳ್ಳಲು ಮುಂದಾಗಿವೆ. ಯಾವುದೇ ಹಂತದಲ್ಲಿ ಎಸ್‌ಐಆರ್ ಪ್ರಕ್ರಿಯೆಯು ಮುಂದಿನ ಚುನಾವಣೆಯಲ್ಲಿ ನಿರ್ಣಾಯಕ ಪಾತ್ರ ವಹಿಸಲಿದ್ದು, ಕಾಂಗ್ರೆಸ್‌ನ ಕಳವಳ ಹಾಗೂ ಬಿಜೆಪಿಯ ಸಂಘಟನಾತ್ಮಕ ಉತ್ಸಾಹ ಹೈವೋಲ್ಟೇಜ್ ಸಭೆಗಳಲ್ಲಿ ಅನಾವರಣಗೊಳ್ಳಲಿದೆ.

ಕಾಂಗ್ರೆಸ್ ರಣತಂತ್ರ: ದೇವನಹಳ್ಳಿಯ ಬ್ರಿಗೇಡ್ ಆರ್ಚಡ್ಸ್‌ನಲ್ಲಿ ಭಾನುವಾರ ಸಂಜೆ 4 ಗಂಟೆಗೆ ಹಸ್ತ ಪಾಳಯದ ಮಹತ್ವದ ವಿಶೇಷ ಸಭೆ ನಿಗದಿಯಾಗಿದೆ. ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷರುಗಳ ಸಮ್ಮುಖದಲ್ಲಿ ನಡೆಯಲಿರುವ ಈ ಸಭೆಗೆ ಕೇವಲ ಆಹ್ವಾನಿತ ನಾಯಕರಿಗಷ್ಟೇ (ಸಚಿವರು, ಸಂಸದರು, ಶಾಸಕರು ಮತ್ತು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು) ಪ್ರವೇಶವಿದೆ. ಮುಂಬರುವ ಚುನಾವಣೆಗಳಿಗೆ ಪಕ್ಷ ಸಜ್ಜುಗೊಳಿಸುವುದು ಹಾಗೂ ಎಸ್‌ಐಆರ್ ವಿಚಾರ ಚರ್ಚೆಯ ಅಜೆಂಡಾ ಎಂದು ತಿಳಿಸಲಾಗಿದೆ. ಈ ಸಭೆಗೂ ಮುನ್ನ ಕೆಪಿಸಿಸಿಯಲ್ಲಿ ಪ್ರಮುಖರ ಸಭೆ ನಡೆಯಲಿದೆ.

ಬಿಜೆಪಿಯಲ್ಲಿ ಉತ್ಸಾಹ: ಪ್ರತಿಪಕ್ಷ ಬಿಜೆಪಿಯಲ್ಲೂ ಸಂಘಟನಾತ್ಮಕ ಚಟುವಟಿಕೆ ಗರಿಗೆದರಿವೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ನಂತರ ಮೊದಲ ಬಾರಿಗೆ ನಿತಿನ್ ನವೀನ್ ಶನಿವಾರ ರಾತ್ರಿಯೇ ಬೆಂಗಳೂರಿಗೆ ಆಗಮಿಸಿದ್ದಾರೆ. ಅವರು ಭಾನುವಾರ ಮುಂಜಾನೆ ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪ ನಿವಾಸದಲ್ಲಿ ಉಪಾಹಾರ ಸ್ವೀಕರಿಸಿ, ಬಳಿಕ ಕಾಡುಮಲ್ಲೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಲಿದ್ದಾರೆ. ಬೆಳಗ್ಗೆ 10 ಗಂಟೆಗೆ ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಪಕ್ಷದ ಸಂಸದರು, ಶಾಸಕರೊಂದಿಗೆ 2 ಗಂಟೆ ಮಹತ್ವದ ಸಮಾಲೋಚನೆ ನಡೆಸುವರು. ರಾಜ್ಯದ ರಾಜಕೀಯ ಸ್ಥಿತಿಗತಿಗಳ ಅವಲೋಕನದ ಜತೆಯಲ್ಲೇ ಕೋರ್ ಕಮಿಟಿ ಸಭೆ ಮುನ್ನಡೆಸುವರು. ನಂತರ ಬೆಂಗಳೂರು ಉತ್ತರ ಜಿಲ್ಲೆಯಲ್ಲಿ ನಡೆಯಲಿರುವ ಪ್ರಶಿಕ್ಷಣ ವರ್ಗದಲ್ಲಿ ಭಾಗಿಯಾಗಿ ಸಂದೇಶ ನೀಡಲಿದ್ದಾರೆ.

ಸಂಶೋಧನೆಗಳು ಪಾರದರ್ಶಕವಾಗಿರಲಿ

ವಿಜಯವಾಣಿ ಚಿತ್ರ

ರಾಣಿ ಚನ್ನಮ್ಮ ವಿವಿಯಲ್ಲಿ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಪ್ರೊ.ಪಿ.ಜಿ.ತಡಸದ, ವಿಶ್ವನಾಥ ಅವಟಿ, ಬಿ.ಎಸ್. ಶಿವರಾಮ ಇತರರಿದ್ದರು.

■ **ವಿಜಯವಾಣಿ ಸುದ್ದಿಜಾಲ** ಬೆಳಗಾವಿ

ಯಾವುದೇ ಕೆಲಸದಲ್ಲಿ ತೊಡಗಿದಾಗ ನೈತಿಕತೆ ಮತ್ತು ಮೌಲ್ಯಗಳು ನಿರ್ಣಾಯಕ ಪಾತ್ರ ವಹಿಸುತ್ತವೆ. ಸಂಶೋಧನೆ ವೈಜ್ಞಾನಿಕ ಪ್ರಕ್ರಿಯೆ ಆಗಿರುವುದರಿಂದ ಪಾರದರ್ಶಕ ಮುಖ್ಯ ಎಂದು ವಿಜಯಪುರದ ಮಹಿಳಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಪ್ರೊ.ಪಿ.ಜಿ.ತಡಸದ ಹೇಳಿದರು.

ಇಲ್ಲಿನ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕುವೆಂಪು ಸಭಾಂಗಣದಲ್ಲಿ ಈಚೆಗೆ ಆಯೋಜಿಸಿದ್ದ ಎರಡು ದಿನದ ಕಾರ್ಯಾಗಾರದಲ್ಲಿ ಮಾತನಾಡಿ, ಸಂಶೋಧನೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಪ್ರಾಮಾಣಿಕತೆ ಇಲ್ಲದಿದ್ದರೆ ಆ ಅಧ್ಯಯನದ ಫಲಿತಾಂಶಗಳು ಸಮಾಜಕ್ಕೆ ದಾರಿ ತಪ್ಪಿಸುವಂತಾಗಬಹುದು ಎಂದರು. ಅಧ್ಯಕ್ಷತೆ ವಹಿಸಿದ್ದ ಸಮಾಜ ವಿಜ್ಞಾನ ವಿಭಾಗದ ಡೀನ್ ಪ್ರೊ. ವಿಶ್ವನಾಥ ಅವಟಿ ಮಾತನಾಡಿ, ಸಂಶೋಧನೆಯಲ್ಲಿ ಫಲಿತಾಂಶಕ್ಕಿಂತ ಬೌದ್ಧಿಕ ಪ್ರಾಮಾಣಿಕತೆ ಅತ್ಯಂತ ಮುಖ್ಯವಾಗಿದೆ ಎಂದರು. ಪ್ರಾಧ್ಯಾಪಕ ಆರ್.ಎನ್.ಮನಗೂಳಿ ಪ್ರಾಸ್ತಾವಿಕ ಮಾತನಾಡಿದರು.

ಬೆಂಗಳೂರಿನ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿ ರಾಷ್ಟ್ರೀಯ ಏರೋಸ್ಪೇಸ್ ಪ್ರಯೋಗಾಲಯದ ಅಂತರಿಕ್ಷ ವಿಜ್ಞಾನ ಮತ್ತು ತಂತ್ರಜ್ಞಾನ ಮಾಹಿತಿ ಕೇಂದ್ರದ ಮುಖ್ಯಸ್ಥ ಡಾ.ಬಿ.ಎಸ್.ಶಿವರಾಮ್, ಗ್ರಂಥಾಲಯ ವಿಜ್ಞಾನ ವಿಭಾಗದ ಮುಖ್ಯಸ್ಥ ಡಾ.ಕಿರಣ ಸವಣೂರ, ಡಾ.ರಮೇಶ ಕುರಿ ಇತರರಿದ್ದರು.

ಭಾವಪೂರ್ಣ ಶ್ರದ್ಧಾಂಜಲಿ

ಜನನ:10-02-1947 ಮರಣ:23-05-2026

ಲಿಂಗೈಕ್ಯ ಪರಮಪೂಜ್ಯ ವೇದಮೂರ್ತಿ ಶ್ರೀ ಚರಮೂರ್ತೀಶ್ವರ ಮಹಾ ಸ್ವಾಮೀಜಿಗಳು.

ಸಾ : ಮಮದಾಪೂರ ತಾ : ಗೋಕಾಕಜಿ : ಬೆಳಗಾವಿ

ಗೋಕಾಕ ತಾಲೂಕಿನ ಮಮದಾಪೂರ ಗ್ರಾಮದ ಆರಾಧ್ಯ ದೈವ ಚರಮೂರ್ತಿಶ್ವರ ಮಹಾಮಠದ " ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ " ಎಂಬ ಬಸವಣ್ಣನವರ ವಚನ ವಾಣಿಯನ್ನು ತಮ್ಮ ಉಸಿರಾಗಿಸಿಕೊಂಡಿದ್ದ ಪರಮಪೂಜ್ಯ ವೇದಮೂರ್ತಿ ಶ್ರೀ ಚರಮೂರ್ತೇಶ್ವರ ಸ್ವಾಮೀಜಿಯವರು ತಮ್ಮ 79ನೇ ವಯಸ್ಸಿನಲ್ಲಿ ಶನಿವಾರ ದಿ.23/05/2026 ರಂದು ಶಿವಾಧೀನರಾದರೆಂದು ತಿಳಿಸಲು ವಿಷಾದವೆನಿಸುವುದು. ನಿಮ್ಮ ಪವಿತ್ರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತೇವೆ.

ಸಂತಾಪ ಸೂಚಿಸುವರು

ಶ್ರೀ ಸುರೇಶ ಬಾ ಸನದಿ. ಶ್ರೀ ಕೆಂಪಣ್ಣ ಚ ಮೈಲನ್ನವರ.

ಗ್ರಾಮ ಪಂಚಾಯತ್ ಮಾಜಿ ಸದಸ್ಯರು ಹಾಗೂ ಶಾಸಕರ ಆಪ್ತ ಸಹಾಯಕರು.

ಸಾ : ಮಮದಾಪೂರ. ತಾ : ಗೋಕಾಕ

ಭಾವಪೂರ್ಣ ಶ್ರದ್ಧಾಂಜಲಿ

ಜನನ:10-02-1947 ಮರಣ:23-05-2026

ಲಿಂಗೈಕ್ಯ ಪರಮಪೂಜ್ಯ ವೇದಮೂರ್ತಿ ಶ್ರೀ ಚರಮೂರ್ತಿಶ್ವರ ಮಹಾ ಸ್ವಾಮೀಜಿಗಳು.

ಸಾ : ಮಮದಾಪೂರ ತಾ : ಗೋಕಾಕ ಜಿ : ಬೆಳಗಾವಿ

ಗೋಕಾಕ ತಾಲೂಕಿನ ಮಮದಾಪೂರ ಗ್ರಾಮದ ಆರಾಧ್ಯ ದೈವ ಚರಮೂರ್ತಿಶ್ವರ ಮಹಾಮಠದ " ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ " ಎಂಬ ಬಸವಣ್ಣನವರ ವಚನ ವಾಣಿಯನ್ನು ತಮ್ಮ ಉಸಿರಾಗಿಸಿಕೊಂಡಿದ್ದ ಪರಮಪೂಜ್ಯ ವೇದಮೂರ್ತಿ ಶ್ರೀ ಚರಮೂರ್ತೇಶ್ವರ ಸ್ವಾಮೀಜಿಯವರು ತಮ್ಮ 79ನೇ ವಯಸ್ಸಿನಲ್ಲಿ ಶನಿವಾರ ದಿ.23/05/2026 ರಂದು ಶಿವಾಧೀನರಾದರೆಂದು ತಿಳಿಸಲು ವಿಷಾದವೆನಿಸುವುದು. ನಿಮ್ಮ ಪವಿತ್ರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತೇನೆ.

ಸಂತಾಪ ಸೂಚಿಸುವ

ಶ್ರೀ ಚಂದ್ರಶೇಖರ ಚ ಕೊಣ್ಣೂರ

ಮಮದಾಪೂರ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘ ನಿ. ಅಧ್ಯಕ್ಷರು ಹಾಗೂ ಹಿರಿಯ ಪತ್ರಕರ್ತರು.

ಸಾ : ಮಮದಾಪೂರ. ತಾ : ಗೋಕಾಕ

ಭಾವಪೂರ್ಣ ಶ್ರದ್ಧಾಂಜಲಿ

ಜನನ:10-02-1947 ಮರಣ:23-05-2026

ಲಿಂಗೈಕ್ಯ ಪರಮಪೂಜ್ಯ ವೇದಮೂರ್ತಿ ಶ್ರೀ ಚರಮೂರ್ತಿಶ್ವರ ಮಹಾ ಸ್ವಾಮೀಜಿಗಳು.

ಸಾ : ಮಮದಾಪೂರ ತಾ : ಗೋಕಾಕಜಿ : ಬೆಳಗಾವಿ

ಗೋಕಾಕ ತಾಲೂಕಿನ ಮಮದಾಪೂರ ಗ್ರಾಮದ ಆರಾಧ್ಯ ದೈವ ಚರಮೂರ್ತಿಶ್ವರ ಮಹಾಮಠದ " ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ " ಎಂಬ ಬಸವಣ್ಣನವರ ವಚನ ವಾಣಿಯನ್ನು ತಮ್ಮ ಉಸಿರಾಗಿಸಿಕೊಂಡಿದ್ದ ಪರಮಪೂಜ್ಯ ವೇದಮೂರ್ತಿ ಶ್ರೀ ಚರಮೂರ್ತೇಶ್ವರ ಸ್ವಾಮೀಜಿಯವರು ತಮ್ಮ 79ನೇ ವಯಸ್ಸಿನಲ್ಲಿ ಶನಿವಾರ ದಿ.23/05/2026 ರಂದು ಶಿವಾಧೀನರಾದರೆಂದು ತಿಳಿಸಲು ವಿಷಾದವೆನಿಸುವುದು. ನಿಮ್ಮ ಪವಿತ್ರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತೇನೆ.

ಸಂತಾಪ ಸೂಚಿಸುವ

ಶ್ರೀ ಆನಂದ ಮಹಾದೇವ ಸೊಂಡೂರ

ಮಹಾಮಠದ ಸದ್ಭಕ್ತರು

ಸಾ : ಮಮದಾಪೂರ. ತಾ : ಗೋಕಾಕ

ಐದನೆಯ ಪುಣ್ಯಸ್ಮರಣೆ

ಜನನ : 20-05-1967 ಮರಣ : 24-05-2021

ದಿ. ಅದೃಶ್ಯಪ್ಪ ಕಲ್ಲಪ್ಪ ಕರಮಳ್ಳನವರ

ಶಿಕ್ಷಕರು, ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆ, ಘಷ್ಟೋಳ್ಳಿ ಸಾ॥ ಇಟಗಿ ತಾ॥ ಖಾನಾಪೂರ

ಇವರು ನಮ್ಮನ್ನಗಲಿ ಇಂದಿಗೆ (24-05-2026 ಕ್ಕೆ) ಐದು ವರ್ಷ ಕಳೆದವು. ನಿಮ್ಮ ಸ್ನೇಹಮಯ ಜೀವನ ಹಾಗೂ ನಿಮ್ಮ ನೆನಪು ಸದಾ ಹಚ್ಚ ಹಸಿರಾಗಿದೆ. ಭಗವಂತನು ನಿಮ್ಮ ಪವಿತ್ರ ಪುಣ್ಯಾತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತೇವೆ.

ನಿಮ್ಮ ಸ್ಮರಣೆಯಲ್ಲಿರುವವರು

ಪತ್ನಿ : ಶ್ರೀಮತಿ ಗೌರವ್ವ ಅದೃಶ್ಯಪ್ಪ ಕರಮಳ್ಳನವರ
ಪುತ್ರ : ಶ್ರೀ ಶ್ರೀನಿವಾಸ ಅದೃಶ್ಯಪ್ಪ ಕರಮಳ್ಳನವರ
ಸೊಸೆ : ಶ್ರೀಮತಿ ವಂದನಾ ಶ್ರೀನಿವಾಸ ಕರಮಳ್ಳನವರ
ಪುತ್ರಿಯರು : ಕುಮಾರಿ ಶಿಲ್ಪಾ, ಕುಮಾರಿ ಜ್ಯೋತಿ
ಹಾಗೂ ಸಮಸ್ತ ಕರಮಳ್ಳನವರ ಬಂಧು ಬಳಗ
ಸಾ॥ ಇಟಗಿ ತಾ॥ಖಾನಾಪೂರ

Bank of Baroda ಬೈಂಕ್ ಆಫ್ ಬಡೌದಾ

Regional Office Stressed Asset Recovery Branch (Hubballi): 2nd Floor, Bellad Tower, Bannigida Stop, Gokul Road, Hubballi-580030, Karnataka, India.
Email - sarhub@bankofbaroda.com

ROSARB BRANCH
Hubli

ಇ-ಹರಾಜು

ಸ್ಥಿರಾಸ್ತಿಯ ಮಾರಾಟಕ್ಕಾಗಿ ಇ-ಹರಾಜು ಮಾರಾಟ ಸೂಚನೆ

2002 ರ ಭದ್ರತಾ ಹಿತಾಸಕ್ತಿ(ಜಾರಿ) ನಿಯಮಗಳ ನಿಯಮ 6(20 ಮತ್ತು 8(6) ರ ಪ್ರಾವಿಸೋಗಳೊಂದಿಗೆ ಓದಿಕೊಳ್ಳಬೇಕಾದ 2002 ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್‌ನಿರ್ಮಾಣ ಹಾಗೂ ಹಿತಾಸಕ್ತಿ ಜಾರಿ ಕಾಯಿದೆಯಡಿ ಇ-ಹರಾಜು.

ಸಾರ್ವಜನಿಕರಿಗೆ ವಿಸ್ತಾರವಾಗಿ, ಸಾಲಗಾರನಿ(ರಿ)ಗೆ, ಅಡಮಾನದಾರನಿಗೆ ಹಾಗೂ ಜಾಮೀನುದಾರನಿ(ರಿ)ಗೆ ವಿದಿಷ್ಟವಾಗಿ ಸೂಚನೆ ನೀಡುವುದೇನೆಂದರೆ, ಕೆಳಕಂಡ ಸ್ಥಿರ ಆಸ್ತಿಗಳ ಭದ್ರತಾ ಸಾಲಿಗರಿಗೆ(ಸೆಕ್ಯೂರ್ಡ್ ಕ್ರೆಡಿಟರ್) ರಿಗೆ ಅಡಮಾನವಾಗಿದ್ದು, ಇದರ ಸ್ವಾಧೀನತೆಯನ್ನು ಸೆಕ್ಯೂರ್ಡ್ ಕ್ರೆಡಿಟರ್‌ರವರಾದ ಬ್ಯಾಂಕ್ ಆಫ್ ಬರೋಡದ ಅಧಿಕೃತ ಅಧಿಕಾರಿಗಳು ಪಡೆದುಕೊಂಡಿದ್ದು, ಇವುಗಳನ್ನು ಕೆಳಕಂಡ ಖಾತೆಗಳ ಬಾಕಿ ವಸೂಲಾತಿಗಾಗಿ "ಎಲ್ಲಿ ಹೇಗಿದೆಯೋ ಹಾಗೆಯೇ, ಎಲ್ಲಿ ಏನಿದೆಯೋ ಹಾಗೆಯೇ ಮತ್ತು ಏನು ಉಳಿದಿದೆಯೋ ಅವುಗಳನ್ನು" ಆಧಾರದ ಮೇಲೆ ಮಾರಾಟ ಮಾಡಲಾಗುತ್ತದೆ. ಸಾಲಗಾರರ/ಅಡಮಾನದಾರರ/ಜಾಮೀನುದಾರರ ಭದ್ರತಾ ಆಸ್ತಿಗಳ/ಬಾಕಿ/ಮೀಸಲು ಬೆಲೆ/ಇ-ಹರಾಜು ದಿನಾಂಕ ಮತ್ತು ಸಮಯ, ಇಎಂಡಿ ಮತ್ತು ಬಿಡ್ ಹೆಚ್ಚಿಸಬಹುದಾದ ಮೊತ್ತ ವಿವರಗಳ ಕೆಳಗಿನಂತಿವೆ.

ಕ್ರ ಸಂಖ್ಯೆ	ಸಾಲಗಾರರ ಮತ್ತು ಅಡಮಾನವಾಗಿರಿಸಿದ ಆಸ್ತಿಯ ಮಾಲೀಕರ ಹೆಸರು ಮತ್ತು ವಿಳಾಸ	ಸ್ಥಿರಾಸ್ತಿಯ ವಿವರ	ಒಟ್ಟು ಬಾಕಿ (17.05.2026 ರಂತೆ)	ಇ-ಹರಾಜಿನ ದಿನಾಂಕ ಮತ್ತು ಸಮಯ	1. ಕಾಯ್ದಿರಿಸಿದ ದರ 2. ಇ.ಎಮ್.ಡಿ 3. ಬಿಡ್ ಹೆಚ್ಚಳ ಮೊತ್ತ ____/-	ಸ್ವಾಧಿನತೆ ವಿವರ	ಆಸ್ತಿ ಪರಿಶೀಲನೆ ದಿನಾಂಕ ಮತ್ತು ಸಮಯ
1 2	ಶ್ರೀ ಪ್ರಸಾದ ಆನಂದ ಕುಲಕರ್ಣಿ ತಂದೆ ಆನಂದ ಕುಲಕರ್ಣಿ, ವಿಳಾಸ: ಪ್ಲಾಟ್ ನಂ 46, ಗೋಕುಲ ನಗರ, ಮುಟಗಾ, ಬೆಳಗಾವಿ, ಕರ್ನಾಟಕ-591124 ಶ್ರೀಮತಿ ಕ್ಷಿತಿಜಾ ಸತೀಶ ಜೋಶಿ ಗಂಡ ಪ್ರಸಾದ ಆನಂದ ಕುಲಕರ್ಣಿ ವಿಳಾಸ: #1725, ರಾಮದೇವಗಲ್ಲಿ, ಬೆಳಗಾವಿ ತಾಲೂಕ ಜಿ:ಬೆಳಗಾವಿ-590001 GPS Coordinates 15.856587 74.581944	(ಸ್ಥಿರಾಸ್ತಿ) ಪ್ಲಾಟ್ ನಂ 46/A, ಕಂಪ್ಯೂಟರ್ ಆಸ್ತಿ ನಂ 150400303500122169, ಆರ್ ಎಸ್ ನಂ 272/2,ಮುಟಗಾ ಗ್ರಾಮ, ಬೆಳಗಾವಿ ಉಪಜಿಲ್ಲೆ, ಜಿ: ಬೆಳಗಾವಿಯಲ್ಲಿರುವ 1200 ಚ.ಅಡಿ ಜಾಗ ಮತ್ತು ಅದರಲ್ಲಿ ಕಟ್ಟಿರುವ ನೆಲಮಹಡಿ ಮತ್ತು ಮೊದಲನೇ ಮಹಡಿ ಹೊಂದಿರುವ 969.22 ಚ.ಅಡಿ ಬಿಲ್ಟ್ ಅಪ್ ವಿಸ್ತೀರ್ಣ ಹೊಂದಿರುವ ಶ್ರೀ ಪ್ರಸಾದ ಆನಂದ ಕುಲಕರ್ಣಿ ಮತ್ತು ಶ್ರೀಮತಿ ಕ್ಷಿತಿಜಾ ಸತೀಶ ಜೋಶಿ ಇವರ ಹೆಸರಿನಲ್ಲಿರುವ ಆಸ್ತಿ ಎಲ್ಲ ಸ್ವತ್ತುಗಳೊಂದಿಗೆ ಚಕಬಂದಿ: ಪೂರ್ವ: ಫ್ಲಾಟ್ ನಂ 46B ಪಶ್ಚಿಮ: ಫ್ಲಾಟ್ ನಂ 45 ಉತ್ತರ: ಫ್ಲಾಟ್ ನಂ 42 ಮತ್ತು 43 ದಕ್ಷಿಣ: ರಸ್ತೆ	ರೂ 45,97,646.21/- (ನಲವತ್ತೈದು ಲಕ್ಷ ತೊಂಬತ್ತೇಳು ಸಾವಿರದ ಆರ್ ನೂರು ನಾಲ್ವತ್ತಾರು ರೂಪಾಯಿಗಳು ಇಪ್ಪತ್ತೊಂದು ಪೈಸೆಗಳು) ಮತ್ತು ಬಡ್ಡಿ ಮತ್ತು ವೆಚ್ಚಗಳು	ಇ-ಹರಾಜಿನ ದಿನಾಂಕ 11-06-2026 ಸಮಯ: ಮಧ್ಯಾಹ್ನ 03.00ರಿಂದ ಸಂಜೆ 05.00 ರ ವರೆಗೆ ಬಿಡ್ ಸಮಯ: 11-06-2026 ಮಧ್ಯಾಹ್ನ 03.00ರಿಂದ ಸಂಜೆ 05.00 ರ ವರೆಗೆ	1.ರೂ 32,77,725.00/- (ಮೂವತ್ತೆರಡು ಲಕ್ಷ ಎಪ್ಪತ್ತೇಳು ಸಾವಿರದ ಏಳು ನೂರ ಇಪ್ಪತ್ತೈದು ರೂಪಾಯಿಗಳು) 2. ರೂ 3,27,773..00/- (ಮೂರು ಲಕ್ಷದ ಇಪ್ಪತ್ತೇಳು ಸಾವಿರದ ಏಳು ನೂರ ಎಪ್ಪತ್ಮೂರು ರೂಪಾಯಿಗಳು (ಇ ಎಮ್ ಡಿ ಮೊತ್ತವನ್ನು 11-06-2026 ಮಧ್ಯಾಹ್ನ 3 ಗಂಟೆಯೊಳಗೆ ಪಾವತಿಸಬೇಕು) 3. ರೂ 50,000/- (ಐವತ್ತು ಸಾವಿರಗಳು ಮಾತ್ರ)	ಭೌತಿಕ	27-05-2026 ರಿಂದ 10-04-2026 ಬೆಳಗ್ಗೆ 11.00 ಗಂಟೆಯಿಂದ 10-06-2026 ಮಧ್ಯಾಹ್ನ 4.00 ಗಂಟೆ ವರೆಗೆ (ರಜಾದಿನಗಳನ್ನು ಹೊರತುಪಡಿಸಿ)

ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ https://www.bankofbaroda.in/e-auction.htm, Baanknet.com ವೆಬ್ ಸೈಟನ್ನು ನೋಡಿ.. ಹೆಚ್ಚಿನ ಮಾಹಿತಿಗಾಗಿ ಶಾಖೆ ವ್ಯವಸ್ಥಾಪಕರು - ಅಥವಾ ಅಧಿಕೃತ ಅಧಿಕಾರಿಗಳನ್ನು 9482397247 ರಲ್ಲಿ ಸಂಪರ್ಕಿಸಿ

ದಿನಾಂಕ: 22-05-2026
ಸ್ಥಳ: ಹುಬ್ಬಳ್ಳಿ

ಸಹಿ/- ಅಧಿಕೃತ ಅಧಿಕಾರಿಗಳು
ಬ್ಯಾಂಕ್ ಆಫ್ ಬರೋಡ

ವಿಜಯವಾಣಿ CLASSIFIEDS

: ಸಂಪರ್ಕಿಸಿ :
0831-2950700
8884432338

ಮಾನಸಿಕ ಅಸ್ವಸ್ಥತೆ, ವ್ಯಸನ, ಲೈಗಿಂಕ ಸಮಸ್ಯೆಗಳು
ಸ್ಕಿಜೋಫ್ರೇನಿಯಾ, ಬೈಪೋಲಾರ್ ಮೂಡ್ ಡಿಸಾರ್ಡರ್, ಉನ್ಮಾದ, ಖಿನ್ನತೆ, ಒ.ಸಿ.ಡಿ., ವಾಮಾಚಾರ, ಮದ್ಯ, ತಂಬಾಕು, ಸಿಗರೇಟ್, ಗುಟಖಾ, ಮಾವಾ, ಗಾಂಜಾ, ಮಿಶ್ರಿ, ಡಿ-ಅಡಿಕ್ಷನ್, ಅಕಾಲಿಕ ಸ್ಖಲನ, ಶಕ್ತಿಹೀನತೆ, ಸ್ವಲನ, ಹಸ್ತಮೈಥುನದಿಂದ ದೌರ್ಬಲ್ಯ, ಲೈಂಕಿಕ ಸಮಸ್ಯೆಗಳು ಮತ್ತು ವೈದ್ಯರ ಆರೈಕೆ ಇತ್ಯಾದಿ ಸಮಸ್ಯೆಗಳಿಗೆ ಸಂಪರ್ಕಿಸಿರಿ:
ನಿರ್ಮಲ ವ್ಯಸನಮುಕ್ತಿ ಪುನರ್ವಸತಿ ಮತ್ತು ಆರೈಕೆ ಕೇಂದ್ರ
ಸ್ಟೇಷನ್ ರಸ್ತೆ, ಮಿರಜ್ (ಸಾಂಗಲಿ)
ಸಂಪರ್ಕ 9922646566 9028081339

ಬಾಡಿಗೆ ಕೊಡುವುದಿದೆ
ಕಾಂಗ್ರೆಸ್ ರಸ್ತೆ, ಟಿಳಕವಾಡಿ ಎಂಆರ್‌ಎಫ್ ಟೈರ್ ಶೋರೂಮ್ ಹತ್ತಿರ ಇರುವ ಕಮರ್ಷಿಯಲ್ ಬಿಲ್ಡಿಂಗ್ ಬಾಡಿಗೆಗೆ ಲಭ್ಯ.
ಗ್ರೌಂಡ್ ಫ್ಲೋರ್- 1700 ಚ.ಅಡಿ
ಮೊದಲ ಮಹಡಿ- 3800 ಚ.ಅಡಿ
ಎರಡನೇ ಮಹಡಿ- 3800 ಚ.ಅಡಿ
ಎರಡೂ ಬದಿಗಳಲ್ಲಿ ರಸ್ತೆ ಸೌಲಭ್ಯ ಇದೆ.
ಸಂಪರ್ಕ ಸಮಯ: ಬೆಳಗ್ಗೆ 10 ರಿಂದ ರಾತ್ರಿ 7 ರವರೆಗೆ
ಮೊ.: 9844483303

SRN BEARINGS PVT. LTD.
REQUIRES
SENIOR MARKETING MANAGER
Candidate with Result oriented & Relevant Exp in sugar industries.
SALARY+INCENTIVES
CV to admin @srnbearings.com.
9629777210

HOUSE FOR RENT
Posh, Specious, Semi - Furnished 1/2/3 BHK, Big Portico, Galleries, Air conditioner with Inverter & Battery, 24 hours water, Car/Two Wheeler Parking, On 1st Floor at 2nd Stage Hanumannagar, Belagavi
Contact: K. V. Kulkarni
9449465769
9663074178
(only Vegetarian Family)

WANTED
Draftsman Electrical -1 Diploma/JOC
Design Engineer -1 Knowledge of Autocad Essential, Diploma (Elect)/ B.E.
Sales / Service Engineer -1 (Elect) Diploma/B.E.
Contact : S P Automotion Khanapur Road, Udyambag, Belagavi ,
9449053379

FOR RENT
Commercial property for Rent 3200 Sq.Ft First floor with front side entry & lift facility available.Address: Zond Building, Near Kolhapur circle, main road, Opp Adishwar showroom. (SP office road), Belgaum.
Contact :
9028519828
9535026077

ಬೇಕಾಗಿದ್ದಾರೆ
ಲೋಟಸ್ ಹಾಸ್ಪಿಟಲ್‌ನಲ್ಲಿ ತುರ್ತು ಉದ್ಯೋಗಾವಕಾಶವಿದೆ. ಖಾಲಿ ಇರುವ ಹುದ್ದೆಗಳು:
GNM ರಿಜಿಸ್ಟರ್ಡ್ ನರ್ಸ್: 06 (ಪುರುಷರು/ಮಹಿಳೆಯರು)
ANM ರಿಜಿಸ್ಟರ್ಡ್ ನರ್ಸ್: 04 (ಪುರುಷರು/ಮಹಿಳೆಯರು)
ವಾರ್ಡ್ ಬಾಯ್ಸ್ ಮತ್ತು ಮಹಿಳಾ ರೋಗಿ ಪಾಲಕರು
ಮರಾಠಿ, ಕನ್ನಡ, ಹಿಂದಿ ಮತ್ತು ಇಂಗ್ಲಿಷ್ ಜ್ಞಾನವಿರಬೇಕು. ನೇರವಾಗಿ ವಾಕ್-ಇನ್ ಸಂದರ್ಶನಕ್ಕೆ ಬನ್ನಿ ಅಥವಾ ನಿಮ್ಮ ಸಂಪೂರ್ಣ ರೆಸ್ಯೂಮೆ ಮತ್ತು ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ 2 ಫೋಟೋಗಳೊಂದಿಗೆ ತಕ್ಷಣ ಸಂಪರ್ಕಿಸಿ.
ಮಂಡೋಳಿ ರೋಡ್, ತಿಲಕವಾಡಿ, ಬೆಳಗಾವಿ-06.
Mob : 8762376397

ನಂ.1 ವಿಜಯವಾಣಿ **ವಿದ್ಯಾರ್ಥಿ ಉದ್ಯೋಗ ಮಿತ್ರ**
ಪ್ರತಿಗಳಿಗೆ ಸಂಪರ್ಕಿಸಿ
8884432418

ಬೇಕಾಗಿದ್ದಾರೆ
ಹೋಟೆಲ್ ಕ್ಲೀನಿಂಗ್ ಕೆಲಸಕ್ಕಾಗಿ ಸಿಬ್ಬಂದಿ ಬೇಕಾಗಿದ್ದಾರೆ, 2 ಪುರುಷರು, 3 ಮಹಿಳೆಯರು, ಆಕರ್ಷಕ ಸಂಬಳ, ಊಟ ಮತ್ತು ವಸತಿ ವ್ಯವಸ್ಥೆ, ಹೋಟೆಲ್
ಆರ್ಕೆ ರಿನೈಸ್ಸಾನ್ಸ್
ಫಿಯೋನಿಕ್ಸ್ ಶಾಲೆಯ ಎದುರು, ನೆಹರು ನಗರ ಬೆಳಗಾವಿ,
: ಸಂಪರ್ಕಿಸಿ :
7026472222
9019565151

ಬೇಕಾಗಿದ್ದಾರೆ
ಬೆಳಗಾವಿ, ಕಣಗಲಾ, ಚಿಕ್ಕೋಡಿ, ಸಂಕೇಶ್ವರ ಹಾಗೂ ಗೋಕಾಕ ನಗರಗಳಲ್ಲಿ ಕೆಲಸ ಮಾಡಲು ಈ ಕೆಳಕಂಡ ಹುದ್ದೆಗೆ ಬೇಕಾಗಿದ್ದಾರೆ.
● ಸೆಕ್ಯೂರಿಟಿ ಗಾರ್ಡ್ಸ್ (ಮಹಿಳಾ/ಪುರುಷ)
● ರೂಮ್ ಬಾಯ್ಸ್
● ಹೌಸ್‌ಕಿಪಿಂಗ್
● ಡಾಟಾ ಆಪರೇಟರ್
● ಗನ್ ಮೆನ್ಸ್ & ● ಬೌನ್ಸರ್
ಆಕರ್ಷಕ ವೇತನ ಜೊತೆಗೆ ಪಿ.ಎಫ್. & ಇ.ಎಸ್.ಐ. ಸೌಲಭ್ಯವಿದೆ.
----: ಸಂಪರ್ಕಿಸಿ :----
8095771650
7019374662

ಬೇಕಾಗಿದ್ದಾರೆ
ಶಾಮಿಯಾನಾ, ಪೆಂಡಾಲ್ ಹಾಗೂ ಡೆಕೋರೇಷನ್ ಕೆಲಸಕ್ಕೆ ಅನುಭವಿ, ಅನುಭವ ಇಲ್ಲದೇ ಇರುವ ಸದೃಢ, ಆರೋಗ್ಯವಂತ ಹಾಗೂ ಶಹರ ಅಥವಾ ಹಳ್ಳಿ ಹಿನ್ನೆಲೆ ಹೊಂದಿರುವ ಕರ್ನಾಟಕದ ಯಾವುದೇ ಭಾಗದಿಂದಾರೂ ಕೆಲಸಗಾರರು ಬೇಕಾಗಿದ್ದಾರೆ. ಊಟ ಮತ್ತು ವಸತಿ ವ್ಯವಸ್ಥೆ ಇರುತ್ತದೆ. ಸ್ಥಳ: ವಿವೇಕಾನಂದ ನಗರ. ಗೋಕುಲ ರಸ್ತೆ, ಹುಬ್ಬಳ್ಳಿ.
9686207904
9060519091

FOR RENT
23,000 Sq.ft Industrial Shed Warehouse, Godown or Industry For Rent
@ Gamangatti Indl. Estate, Hubballi
84949 00199
82960 19699

ಪ್ರಿಯ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿರುವ ಮಾಹಿತಿ, ವಸ್ತುಲೋಪ -ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತು ನೀಡುವವರೊಂದಿಗೆ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
ಜಾಹೀರಾತು ವ್ಯವಸ್ಥಾಪಕರು

ನಿಮ್ಮ ಮನೆಗೆ ವಿಜಯವಾಣಿ ಪತ್ರಿಕೆ ಬರುತ್ತಿಲ್ಲವೇ?
ಸಂಪರ್ಕಿಸಿ: 8884432418 8884432467